# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.39/2023** **ಡಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಕೆಂಚನಾಯಕ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 23 –04 –2026. |

**ಪಾಟೀ ಸವಾಲುಃ ಶ್ರೀ ಹೆಚ್ ಜೆ ಎಸ್ ವಕೀಲರಿಂದಃ**

ಈ ದಾವೆಯಲ್ಲಿ ನಾನು 2 ನೇ ಪ್ರತಿವಾದಿ ಆಗಿರುತ್ತೇನೆ. ಈ ದಾವ ಹೂಡುವ ಮುಂಚೆ ವಾದಿಯು ವಕೀಲರ ಮೂಲಕ ಒಂದು ವಕೀಲರ ನೋಟೀಸು ಬಂದಿರುತ್ತದೆ ಎಂದರೆ ಸರಿ. ಮತ್ತು ಸದರಿ ವಕೀಲರ ನೋಟೀಸು ದಿಃ21–12–2022 ( ನಿಪಿ–2) ರಂದು ಬಂದಿರುತ್ತದೆ ಎಂದರೆ ಸರಿ. ( ನಿಪಿ–2) ನಮಗೆ ವಕೀಲರ ನೋಟೀಸು ಬಂದ ನಂತರ ನಾವು ಪ್ರತ್ಯುತ್ತರ ಕಳುಹಿಸಿರುವುದಿಲ್ಲ. ಮತ್ತು ಪ್ರತ್ಯುತ್ತರನ್ನು ಕೊಡಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ದಾವಾ ಷೆಡ್ಯೂಲ್ ಸ್ವತ್ತು ಸರ್ವೆ ನಂಬರ್ 215/3 ಇದರಲ್ಲಿ 1 ಎಕರೆ 2 ಗುಂಟೆ ಜಮೀನಿಗೆ ಮಾತ್ರ ಸೀಮಿತ ಆಗಿರುತ್ತದೆ ಎಂದರೆ ಸರಿ. ವಾದಿ ಹಿಮಾಮ್ ಸಾಬ್ ರವರ ಮಗಳು ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹಿಮಾಮ್ ಸಾಬ್ ರವರಿಗೆ ಎಷ್ಟು ಜನ ಮಕ್ಕಳು ಇದ್ದರು ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ದಾವಾ ಷೆಡ್ಯೂಲ್ ಸ್ವತ್ತು ನಿಮ್ಮ ಸ್ವಾಧೀನದಲ್ಲಿ ಯಾವ ದಿನಾಂಕದಂದು ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನಮಗೆ ದಿಃ 26-04-1966 ಕ್ರಯಕ್ಕೆ ಕೊಟ್ಟನಂತರ ನಾವು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುತ್ತೇವೆ . ಮೆಹಮೂದ್ ಸಾಬ್ ರವರು ನಮ್ಮ ತಾಯಿಯವರಿಗೆ ದಿಃ 10-12-1962 ರಂದು ಬೋಗ್ಯಕ್ಕೆ ನೀಡಿರುತ್ತಾರೆ. ನಮ್ಮ ತಂದೆ ಹೆಸರು ಮರಿನಾಯಕ ಇರುತ್ತದೆ. ನಿಮ್ಮ ತಂದೆಯವರಿಗೆ ಈ ಸ್ವತ್ತು ಮಾರಾಟ ಮಾಡುವ ಮುಂಚೆ ನಿಮ್ಮ ತಾಯಿಯವರಿಗೆ ಬೋಗ್ಯಕ್ಕೆ ಎಂದು ನೀಡಿರುತ್ತಾರೆ ಎಂದು ಹೇಳಿರುವಿರಾ ಸದರಿ ಬೋಗ್ಯ ಪತ್ರದ ನೊಂದಣಿ ಆಗಿತ್ತೇ ಎಂಬ ಪ್ರಶ್ನೆಗೆ ಸಾಕ್ಷಿಯು

ನೊಂದಣಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನೊಂದಣಿ ಆದ ಬೋಗ್ಯ ಪತ್ರವನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಬೋಗ್ಯ ಪತ್ರ ರದ್ದು ಆಗಿರುವುದಿಲ್ಲ ಮತ್ತು ಆ ಕಾರಣದಿಂದ ನಿಮ್ಮ ತಂದೆಯವರಿಗೆ ಮಾರಾಟ ಮಾಡಲು ಬರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಮಾರಾಟ ಮಾಡಲು ಬರುತ್ತದೆ ಎಂದು ನುಡಿಯುತ್ತಾರೆ. 1966 ನೇ ದಾವಾ ಷೆಡ್ಯೂಲ್ ಸ್ವತ್ತು ನಮಗೆ ಮೆಹಮೂದ್ ಸಾಬ್ ಎನ್ನುವವರು ನನ್ನ ತಂದೆಗೆ ಮಾರಾಟ ಮಾಡಿರುತ್ತಾರೆ. ಮೆಹಮೂದ್ ಸಾಬ್ ಎನ್ನುವವರಿಗೆ ಈ ಆಸ್ತಿ ಹೇಗೆ ಬಂದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಈ ಆಸ್ತಿಯು ಮೊಹಮೂದ್ ಸಾಬ್ ಎನ್ನುವವರಿಗೆ ಅವರ ತಂದೆಯಾದ ಹಿಮಾಮ್ ಸಾಬ್ ರವರಿಂದ ಬಂದಿರುತ್ತದೆ ಮತ್ತು ಇದು ಅವರ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ. ಮೆಹಮೂದ್ ಸಾಬ್ ಎನ್ನುವವರಿಗೆ ದಾವಾ ಷೆಡ್ಯೂಲ್ ಸ್ವತ್ತು ಅವರ ತಂದೆಯಿಂದ ಬಂದಿರುತ್ತದೆ ಎಂದು ತೋರಿಸಲು ನಾವು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಮತ್ತು ನಾವು ಕೂಡ ಮೆಹಮೂದ್ ಸಾಬ್ ಎನ್ನುವವರಿಗೆ ದಾವಾ ಷೆಡ್ಯೂಲ್ ಸ್ವತ್ತು . ಹೇಗೆ ಬಂದಿರುತ್ತದೆ ಎಂದು ತಿಳಿದುಕೊಂಡಿರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತು ಹಿಮಾಮ್ ಸಾಬ್ ಎನ್ನುವವರ ಹೆಸರಿನಲ್ಲೇ ಇರುತ್ತದೆ ಮತ್ತು ಮೆಹಮೂದ್ ಸಾಬ್ ರವರಿಗೆ ಪರಭಾರೆ ಮತ್ತು ಬೋಗ್ಯ ಮಾಡಲು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಮತ್ತು ಮೆಹಮೂದ್ ಸಾಬ್ ರವರಿಗೆ ಈ ಆಸ್ತಿಯನ್ನು ಬೋಗ್ಯ ಮಾಡಲು ಕೂಡ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಹಿಮಾಮ್ ಸಾಬ್ ರವರ ಹೆಸರಿನಲ್ಲಿ ದಾವಾ ಷೆಡ್ಯೂಲ್ ಸ್ವತ್ತು .215/3 ರಲ್ಲಿ 1 ಎಕರೆ 2 ಗುಂಟೆ ಅವರ ಹೆಸರಿನಲ್ಲಿ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಇದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತಿನ ಸರ್ವೆ ನಂಬರ್ ನಲ್ಲಿ ಮೂರು ಪೋಡುಗಳನ್ನು ಆಗಿರುತ್ತದೆ ಎಂದರೆ ಸರಿ . ಸರ್ವೆ ನಂಬರ್ 215 ರಲ್ಲಿ 2 ಎಕರೆ 29 ಗುಂಟೆ ಇರುವುದಿಲ್ಲ 2 ಎಕರೆ 25 ಗುಂಟೆ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಇದರ ಬಗ್ಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು . ಸರ್ವೆ ನಂಬರ್ 215 ರಲ್ಲಿ 0.33 ಗುಂಟೆ ಬಸಪ್ಪ ಎನ್ನುವವರಿಗೆ ಮತ್ತು 0.33 ಗುಂಟೆ ನಾಗಮ್ಮ ಎನ್ನುವವರಿಗೆ ಯಾರು ಮಾರಾಟ ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು

ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತಿನ ಸರ್ವೆ ನಂಬರ್ ಸರ್ವೆ ನಂಬರ್ 215 ರಲ್ಲಿ ಒಟ್ಟು 2 ಎಕರೆ 23 ಗುಂಟೆ ಇರುತ್ತದೆ ಮತ್ತು 215/1, 215/2 ದಾವಾ ಷೆಡ್ಯೂಲ್ ಸ್ವತ್ತು ವಾದಿಯವರ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

ದಾವಾ ಷೆಡ್ಯೂಲ್ ಸ್ವತ್ತಿನ ಸರ್ವೆ ನಂಬರ್ ಸರ್ವೆ ನಂಬರ್ 215 ರಲ್ಲಿ ಒಟ್ಟು 2 ಎಕರೆ 23 ಗುಂಟೆ ಇರುತ್ತದೆ ಮತ್ತು 215/1, 215/2 ದಾವಾ ಷೆಡ್ಯೂಲ್ ಸ್ವತ್ತು ವಾದಿಯವರ ಸ್ವಾಧೀನದಲ್ಲಿ ಇದ್ದು ಉಳುಮೆ ಮಾಡುತ್ತಿದ್ದಾರೆ ಆದ್ದರಿಂದ ಸದರಿ ಹೂಡಿದ ದಾವೆಯು ಸರ್ವೆ ನಂಬರ್ 215/3 1 ಎಕರೆ 2 ಗುಂಟೆಗೆ ಸೇರಿದ ಆಸ್ತಿಗೆ ಮಾತ್ರ ಸೀಮಿತ ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಇದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದಲ್ಲಿ ನಮಗೆ ಸೇರಿದ ಆಸ್ತಿಯ ಚೆಕ್ಕು ಬಂಧಿಯನ್ನು ಮತ್ತು ಷೆಡ್ಯೂಲ್ ಅನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಮೆಹಮೂದ್ ಸಾಬ್ ಎನ್ನುವವರು ನಿಮಗೆ ತಂದೆಯವರಿಗೆ ನೊಂದಣಿ ಆದ ಕ್ರಯ ಪತ್ರದ ಮೂಲಕ ರೂ 500/- ರೂಪಾಯಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದು ಹೇಳಿರುವಿರಾರ ಈ ನೊಂದಣಿ ಅದ ಮಾರಾಟ ಪತ್ರದಲ್ಲಿ ಯಾರು ಸಾಕ್ಷಿಯನ್ನಾಗಿ ಸಹಿ ಹಾಕಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾವು ನ್ಯಾಯಾಲಯಕ್ಕೆ ಕೊಟ್ಟಿರುವ ದಾಖಲೆಯಲ್ಲಿನ ಚಕ್ಕುಬಂಧಿ ಮತ್ತು ನಿಮ್ಮ ಕ್ರಯಪತ್ರದಲ್ಲಿ ಇರುವ ಚಕ್ಕುಬಂಧಿ ಒಂದೇ ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಒಂದೇ ಆಗಿರುವುದಿಲ್ಲ ಬೇರೆ ಚಕ್ಕುಬಂಧಿ ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತಿನ ಸರ್ವೆ 215/3 ರಲ್ಲಿ ಇರುವ 1 ಎಕರೆ 2 ಗುಂಟೆ ಇಮಾಮ್ ಸಾಬ್ ರವರ ಹೆಸರಿನಲ್ಲಿ ಇತ್ತು ಮತ್ತು ಮೆಹಮೂದ್ ಸಾಬ್ ರವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಿಃ 19-07-1979 ಇಮಾಮ್ ಸಾಬ್ ನಿಮ್ಮ ತಂದೆಯವರಿಗೆ ನಿಪಿ-1 ರಂತೆ ಬೋಗ್ಯ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಮತ್ತು ಈ ಬೋಗ್ಯ ಪತ್ರ ನೊಂದಣಿ ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಇದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಇಮಾಮ್ ಸಾಬ್ ಎನ್ನುವವರು ನಮ್ಮ ತಂದೆಯವರಿಗೆ ಈ ದಾವಾ ಷೆಡ್ಯೂಲ್ ಸ್ವತ್ತನ್ನು ಬೋಗ್ಯಕ್ಕೆ ನೀಡಿದ್ದರು ಎಂದರೆ ಸರಿಯಲ್ಲ. ಮತ್ತು ನಿಮ್ಮ ತಂದೆಯವರಿಗೆ ಮಾಡಿದ

ಬೋಗ್ಯ ಪತ್ರದ ಈಗಲೂ ಸಹ ಊರ್ಜಿತ ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನಮಗೆ ಬೋಗ್ಯವೇ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಡಿ–12 ರಲ್ಲಿ ಕ್ರಮ ಸಂಖ್ಯೆ 2 ರಲ್ಲಿ ಆಸ್ತಿ ಸರ್ವೆ ನಂಬರ್ 215 ರಲ್ಲಿ ಇರುವ 1 ಎಕರೆ 10 ಗುಂಟೆ ದಸ್ತಾವೇಜಿನ ಸ್ವರೂಪ ಮತ್ತು ಮೌಲ್ಯ ಎಂದು ಬರೆದಿರುವ ಜಾಗದಲ್ಲಿ ಬೋಗ್ಯ ಎಂದು ನಮೂದು ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರೂ. 300 ರೂಪಾಯಿಗಳಿಗೆ ನಿಮ್ಮ ತಂದೆಯವರು ಮೆಹಮೂದ್ ಸಾಬ್ ಎನ್ನುವವರಿಂದ ಬೋಗ್ಯಕ್ಕೆ ಪಡೆದುಕೊಂಡಿರುತ್ತಾರೆ ಮತ್ತು ಬೋಗ್ಯಕ್ಕೆ ಪಡೆದ ಕಾರಣ ರೂ. 300 ರೂಪಾಯಿಗಳನ್ನು ವಾದಿಯಿಂದ ವಾಪಸ್ಸು ಪಡೆದುಕೊಂಡು ದಾವಾ ಷೆಡ್ಯೂಲ್ ಸ್ವತ್ತುನ್ನು ನೀವು ವಾದಿಯವರಿಗೆ ವಾಪಸ್ಸು ಕೊಡಬೇಕಾಗುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ದಾವಾ ಷೆಡ್ಯೂಲ್ ಸ್ವತ್ತಿನ ಆಸ್ತಿಯನ್ನು ನಾವು ಬೋಗ್ಯಕ್ಕೆ ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಷೆಡ್ಯೂಲ್ ಸ್ವತ್ತಿಗೂ ಮತ್ತು ಮೆಹಮೂದ್ ಸಾಬ್ ಎನ್ನುವವರಿಗೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**